ಅಧ್ಯಕ್ಷರು.—ಅದನ್ನು ಓದಿ ಹೇಳಿ.

ಶ್ರೀ ಬಿ. ಸ್ವಾಮಿರಾವ್.—ಕಳೆದ ಸಾರಿ ದಾಖಲೆಗಳನ್ನು ಹಾಜರು ಮಾಡಿದ್ದರೂ ಏನು ಮಾಡಿಲ್ಲ.

ಅಧ್ಯಕ್ಷರು.—ನಾವು ರೂಲ್ಸ್ ಪ್ರಕಾರ ಹೋಗಬೇಕಾಗುತ್ತದೆ. ಅದನ್ನು ಓದಿ ಹೇಳಿ,

ಶ್ರೀ ಬಿ. ಸ್ವಾಮಿರಾವ್.—ದಾಖಲೆಗಳನ್ನು ಹಾಜರು ಮಾಡಿದರು ನನಗೆ ಇದುವರೆಗೂ ಉತ್ತರ ಬಂದಿಲ್ಲ. ಇವೊತ್ತು ಮಂತ್ರಿಗಳು ಇಲ್ಲ. ಈ ವಿಷಯದ ಬಗ್ಗೆ ಸಾವಿರಾರು ಸಾರಿ ಪ್ರಸ್ತಾಪ ಮಾಡಿದ್ದೇನೆ. ಅದೂ ಪ್ರಯೋಜನ ಆಗುತ್ತಿಲ್ಲ.

ಅಧ್ಯಕ್ಷರು.—ತಾವು ಓದಿ ಹೇಳಿ.

7) ಶಿವಮೊಗ್ಗದ ವರಾಹಿ, ಚಕ್ರಾ ಯೋಜನೆಯ ಕೆಳಗಡೆ ವ್ಯವಸಾಯ ಮಾಡಿಕೊಂಡಿರುವ ಬಗ್ಗೆ.

ಶ್ರೀ ಬಿ. ಸ್ವಾಮಿ ರಾವ್.—ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯಲ್ಲಿ ಚಕ್ರಾ, ವರಾಹಿ, ಸಾವೆಹಕ್ಕಲು, ಲಿಂಗನಮಕ್ಕಿ, ರೈತರನ್ನು ಸಾಗುವಳಿಗೆ ಯೋಗ್ಯವಾದ ಭೂಮಿಯಲ್ಲಿ ಅಂದಿನ ಸರ್ಕಾರ ಮತ್ತು ಹೈಪವರ್ ಕಮಿಟಿ, ಭೂಮಿ ಸಾಗುವಳಿ ಮಾಡಿಕೊಂಡಿರುವಂತೆ ಆದೇಶ ಕೊಡಲಾಗಿತ್ತು. ಮತ್ತು ಹಿಂದುಳಿದ ಭೂ ಹೀನ ನಿರುದ್ಯೋಗಿಗಳು ಸಹ ೧೯೭೮ರ ಹಿಂದೆಯೇ ಸಾಗುವಳಿ ಸ್ವಾಧೀನ ಹೊಂದಿದ್ದು ಈಗಲೂ ಸ್ವಾಧೀನದಲ್ಲಿರುತ್ತಾರೆ. ಹೀಗೆ ಸ್ವಾಧೀನ ಅನುಭವದಲ್ಲಿರುವ ರೈತರ ಮೇಲೆ ಶಿವಮೊಗ್ಗ ತಾಲ್ಲೂಕು ಸಿರಿಗೆರೆ ವಲಯ ಅರಣ್ಯಾಧಿಕಾರಿ ವಸಂತಕುಮಾರ್ ಎಂಬುವರು ಒಂದು ವರ್ಷದಿಂದ ಈವರೆಗೂ ರೈತರ ಭೂಮಿಯ ಮೇಲೆ ಮತ್ತು ರೈತರ ಮೇಲೆ ಹಲ್ಲೆ ನಡೆಸಿರುತ್ತಾನೆ ರೈತರನ್ನು ಕಾನೂನು ಬಾಹಿರವಾಗಿ ಮರಕ್ಕೆ ಕಟ್ಟಿ ಹೊಡೆಯುವುದು, ಬಟ್ಟೆ ಬಿಚ್ಚಿ ಕಳಿಸುವುದು, ಜೀಪಿನಿಂದ ಡಿಕ್ಕಿ ಹೊಡೆಸುವುದು, ಊರುವಲು ಕಟ್ಟಿಗೆ ತರುವ ಹೆಣ್ಣು ಮಕ್ಕಳ ಸೀರೆಗೆ ಬೆಂಕಿ ಹಚ್ಚುವುದು ಗದ್ದೆಯಲ್ಲಿ ಕೆಲಸ ಮಾಡುವ ಮತ್ತು ಮನೆಯೊಳಗಿರುವ ಹೆಣ್ಣು ಮಕ್ಕಳಿಗೆ ಹಾಗೂ ರೈತರ ಮನೆಗೆ ನುಗ್ಗಿ ಹಿಂಸೆ ಕೊಡುತ್ತಿರುವ ಪ್ರಕರಣಗಳು ನಡೆಯುತ್ತಿವೆ. ಶಿನೇ ಸ್ವಾತಂತ್ರೋತ್ಸವದ ಶುಭ ಸಂದರ್ಭದ ಅಂಗವಾಗಿ ಶಿವಮೊಗ್ಗ ತಾಲ್ಲೂಕು ಹಾರ್ನಳ್ಳಿಯ ಜನರಿಗೆ ಈ ರೀತಿಯ ಶುಭಷಾಯಗಳನ್ನು ಸಲ್ಲಿಸಿರುತ್ತಾನೆ. ಈ ಅಧಿಕಾರಿಯ ಬಗ್ಗೆ ಅನೇಕ ಬಾರಿ ಪತ್ರದ ಮೂಲಕ, ಅರ್ಜಿಯ ಮೂಲಕ ಮಂತ್ರಿಗಳ ಸಮ್ಮುಖದಲ್ಲಿ ತಿಳಿದರೂ ಸದರೀ ಅಧಿಕಾರಿಯನ್ನು ಹತೋಟಿಯಲ್ಲಿಡಲು ಅರಣ್ಯ ಮಂತ್ರಿಗಳಿಗೆ ಸಾಧ್ಯವಾಗಿಲ್ಲ. ಪುನಃ ನಿನ್ನೆ ಮತ್ತು ಮೊನ್ನೆ ಚಿಕ್ಕಮಧಲಿ ಎಂಬ ಊರಿನಲ್ಲಿ ಬಡ ರೈತರನ್ನು ಥಳಿಸಿರುವ ಸುದ್ದಿ ಬಂದಿದೆ. ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಅಧ್ಯಕ್ಷರು.—ಮಂತ್ರಿಗಳು ಯಾರಾದರೂ ಇದರ ಬಗ್ಗೆ ಉತ್ತರ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಇವರು ಹೇಳಿದ್ದು ಕೇಳಿಕೊಂಡು ಹೋದರೆ ಏನು ಪ್ರಯೋಜನ. ಈ ರೀತಿ ಹೇಳಿದರೆ ಹೇಗೆ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—ಅಧ್ಯಕ್ಷರೆ, ಅರಣ್ಯ ಮಂತ್ರಿಗಳು ವಿಧಾನಪರಿಷತ್ತಿನಲ್ಲಿ ಅವರ ಖಾತೆಗೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಿದ್ದಾರೆ. ಅವರು ಬಂದ ತಕ್ಷಣ ಈ ವಿಷಯವನ್ನು ತಿಳಿಸುತ್ತೇನೆ. ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆಂದು ಸರ್ಕಾರದ ಪರವಾಗಿ ಸ್ವಾಮಿರಾವ್ ಅವರಿಗೆ ಭರವಸೆ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಈ ವಿಚಾರದಲ್ಲಿ ಟೆಲಿಫೋನ್ ಕಾಲ್ ಬಂದಿನೆ, ಜನರಿಗೆ ಹೊಡೆಯತಕ್ಕದ್ದಲ್ಲ, ಡಿಕ್ಕಿ ಹೊಡೆಸುವುದು, ಇವೆಲ್ಲಾ ಬಹಳ ಸೀರಿಯಸ್ ವಿಚಾರ. ಈಗ ಅಲ್ಲಿ ಕಂಪ್ಲೆಂಟ್ ಕೊಟ್ಟರು ಕೇಸ್ ರಿಜಿಸ್ಟರ್ ಆಗದೇ ಇರುವ ವಿಚಾರ ಇದೆ, ಅರಣ್ಯ ಇಲಾಖೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿ, ಅದನ್ನು ಬಿಟ್ಟು ಬಂದೂಕದಿಂದ ಹೊಡೆಯುವುದು ದೊಣ್ಣೆಯಿಂದ ಕತ್ತಿಯಿಂದ ಹೊಡೆಯುವುದು ಒದೆಯತಕ್ಕದ್ದು, ಕೈಕಾಲು ಮುರಿಯುವುದು, ಅಂದರೆ ಏನು? ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಇವೊತ್ತು ಅಥವಾ ನಾಳೆಯೊಳಗೆ ಉತ್ತರ ಬರದಿದ್ದರೆ ನಾವು ಬೇರೆ ಕ್ರಮವನ್ನು ಅನಿವಾರ್ಯವಾಗಿ ಈ ಸದನದಲ್ಲಿ ಹಾಕಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಇವೊತ್ತು ಸಾಯಂಕಾಲದೊಳಗೆ ಅಥವಾ ನಾಳೆ ಉತ್ತರ ಒದಗಿಸುತ್ತೇವೆಂದು ಮಾನ್ಯ ಮಂತ್ರಿಗಳೇ ತಿಳಿಸಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಹಿಂದೆ ಕೂಡ ಇದೇ ರೀತಿ ಉತ್ತರ ಹೇಳುತ್ತೇವೆಂದು ಹೇಳಿದ್ದರು ಈ ಬಗ್ಗೆ ಇನ್ನೂ ನಮಗೆ ಉತ್ತರ ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೆ, ಮಾನ್ಯ ಅರಣ್ಯ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಅವರು ಬಂದತಕ್ಷಣ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಇಲ್ಲಿ ಇಲ್ಲ ಎನ್ನುವ ಪ್ರಶ್ನೆ ಅಲ್ಲ. ನಿಮ್ಮ ಉತ್ತರ ಯಾವಾಗಲೂ ಒಂದೇ ತರಹ ಇರುತ್ತದೆ. ತಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬೇಕು

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ

೨-೩೦ ಪಿ. ಎಂ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು, ಬಿ. ಜಿ. ಪುರ ಹೋಬಳಿ, ಕಲ್ಯಾಣಿ ಕೊಪ್ಪಲು ಗ್ರಾಮದ ನಿವಾಸಿ ಮಾದಯ್ಯನನ್ನು ಕೊಲೆ ಮಾಡಿರುವ ಬಗ್ಗೆ

ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು, ಬಿ. ಜಿ. ಪುರ ಹೋಬಳಿ ಕಲ್ಯಾಣಿ ಕೊಪ್ಪಲು ಗ್ರಾಮದ ನಿವಾಸಿ ಗಾರೆ ಕೆಲಸ ಮಾಡುವ ಬಿ.ಡಿ.ಮಾದಯ್ಯ ಎಂಬುವನನ್ನು ಲಿಂಗರಾಜು ಎಂಬುವನು ಗಾರೆ ಕೆಲಸಕ್ಕೆ ಅಂತ ಕರೆದುಕೊಂಡು ಹೋಗಿದ್ದು ಸುಮಾರು ಐದು ದಿನಗಳ ನಂತರ ಸದರಿ ಮಾದಯ್ಯನನ್ನು ಮರಕ್ಕೆ ನೇತು ಹಾಕಿರುವುದಾಗಿ ಆಕ್ಕಪಕ್ಕದ ಜನರು ಮಾದಯ್ಯನ ಪತ್ನಿ ಮಹದೇವಮ್ಮನಿಗೆ ತಿಳಿಸಿದ ನಂತರ, ಮಹದೇವಮ್ಮ ಸ್ಥಳಕ್ಕೆ ಹೋಗಿ ಮರಕ್ಕೆ ನೇತು ಬಿದ್ದಿದ್ದುದು ಮಾದಯ್ಯನೇ ಎಂಬುದನ್ನು ಖಾತರಿ ಪಡಿಸಿಕೊಂಡ ನಂತರ ಪೋಲೀಸರಿಗೆ ಹಾಗೂ ವೈದ್ಯರಿಗೆ ದೂರು ಕೊಟ್ಟು ಅವರು ಮಹಜರು ನಡೆಸಿ ಶವಪರೀಕ್ಷೆ ನಡೆಸಿದರು. ಈ ಬಗ್ಗೆ ಲಿಂಗರಾಜುವಿನ ಮೇಲೆ ಅನುಮಾನವಿದೆ. ಎಂದು ಪೋಲೀಸರು ಠಾಣೆಯ ಉಪನಿರೀಕ್ಷಕರಿಗೆ ತಿಳಿಸಿದ್ದಾಗ್ಯೂ ಯಾವ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ ಈ ವಿಷಯವನ್ನು ಮಹದೇವಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ ದೂರು ನೀಡಿ ಲಿಂಗರಾಜು, ವೈದ್ಯರು ಹಾಗೂ ಪೋಲೀಸರು ಠಾಣೆಯ ಉಪನಿರೀಕ್ಷಕರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಸರಕಾರ ಕೂಡಲೇ ಕ್ರಮ ಕೈಕೊಂಡು ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಿ ಮಹದೇವಮ್ಮನಿಗೆ ಸೂಕ್ತ ಸಹಾಯ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಲು ಈ ಸೂಚನೆ ನೀಡಲಾಗಿದೆ

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹಸಚಿವರು).—ಈಗಾಗಲೇ ಸಿ.ಓ.ಡಿ.ಗೆ ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಆರ್ಡರ್ ಮಾಡಿದ್ದೇವೆ.

ಬೆಂಗಳೂರು ನಗರದಲ್ಲಿ ಸಿನಿಮಾ ಮಂದಿರಗಳನ್ನು ಮುಚ್ಚಿರುವುದರಿಂದ ಅಲ್ಲಿ ಕೆಲಸ ಮಾಡುತ್ತಿದ್ದ ನೌಕರರಿಗೆ ತೊಂದರೆಯುಂಟಾಗಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಕಳೆದ ೧೦ ದಿವಸದಿಂದ ಬೆಂಗಳೂರಿನಲ್ಲಿ ಸಿನಿಮಾ ಮಂದಿರಗಳಲ್ಲಿ ಕೆಲಸ ಮಾಡುವ ನೌಕರರು ಹೈಕೋರ್ಟ್ ತೀರ್ಪಿನಂತೆ ಅವರಿಗೆ ಕೊಡಬೇಕಾದ ಸಂಬಳ ಕೊಡಬೇಕೆಂದು ಚಳುವಳಿ ನಡೆಸುತ್ತಿದ್ದು ಎಲ್ಲ ಚಿತ್ರ ಮಂದಿರಗಳು ಬಂದ್ ಆಗಿವೆ.

ಇದರ ಕಾರಣ ನಿನ್ನೆ ನಗರದ ಕಪಾಲಿ ಚಿತ್ರ ಮಂದಿರದ ಮುಂದೆ ಮುಂಗಡ ಟಿಕೆಟ್ ಕೊಡಲಿಲ್ಲ ವೆಂಬ ಕಾರಣ ಚಿತ್ರ ಪ್ರೇಮಿಗಳು ಸಿಟ್ಟಿಗೆದ್ದು ರಸ್ತೆಗಳಲ್ಲಿ ಓಡಾಡುತ್ತಿದ್ದ ವಾಹನಗಳಿಗೆ ಕಲ್ಲು ತೂರಿ ಅಲ್ಲಲ್ಲಿ ಗಲಭೆ ಆದ ಸಂಗತಿಗಳು ಪತ್ರಿಕೆಯಲ್ಲಿ ಪ್ರಕಟವಾಗಿದೆ.